# ಪ್ರದರ್ಶನ ಕಲೆ ಮತ್ತು ಮೂಢನಂಬಿಕೆ

ಪುಷ್ಪ ಜೆ. ಎಲ್.

ಅತಿಥಿ ಉಪನ್ಯಾಸಕರು

ಕರ್ನಾಟಕ ಸಂಗೀತ ವಿಭಾಗ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಮೈಸೂರು,ಕರ್ನಾಟಕ, ಭಾರತ

## ಅಮೂರ್ತ

ಮೊದಲಿಗೆ ಮೂಢನಂಬಿಕೆ ಹಾಗೂ ಪವಾಡದ ವ್ಯತ್ಯಾಸವನ್ನು ತಿಳಿಯೋಣ. ಮೂಢನಂಬಿಕೆಯೆಂದರೆ ಮನುಷ್ಯನ ಮನಸ್ಸಿನಲ್ಲಿ ಯಾವುದಾದರು ಒಂದು ವಿಷಯದ ಬಗ್ಗೆ ಸತ್ಯ ಅಸತ್ಯದ ಹೊರತಾಗಿ ಉಂಟಾಗುವ ಧೃಡವಾದ ನಂಬಿಕೆ. ಪವಾಡವೆಂದರೆ ಸಿದ್ಧಿಪುರುಷರಲ್ಲಿರುವಂತಹ ಶಕ್ತಿ. ಅದರಿಂದ ಅವರು ಎಲ್ಲಾ ಕಾರ್ಯಗಳನ್ನು ಸಿದ್ದಿಸಲು ಶಕ್ತರಾಗಿರುತ್ತಾರೆ.

ಕಲೆಯಲ್ಲಿ ಮೂಢನಂಬಿಕೆಯೆಂಬುದು ಆದಿ ಮಾನವನ ಕಾಲದಿಂದಲೂ ಪ್ರಯೋಗದಲ್ಲಿದೆ. ಪ್ರತಿಯೊಬ್ಬರೂ ಯಾವುದಾದರೊಂದು ಮೂಢನಂಬಿಕೆಯಲ್ಲಿ ಇರುವುದು ಸಾಮಾನ್ಯ. ಕೆಲವರು ತಮ್ಮ ವೈಯಕ್ತಿಕ ವಿಷಯದಲ್ಲಿ ಮೂಏನಂಬಿಕೆಯನ್ನಿರಿಸಿಕೊಳ್ಳುತ್ತಾರೆ. ಕೆಲಚರು ಕಲೆಯಲ್ಲಿ ಅಂದರೆ ಸಂಗೀತದಲ್ಲಿ ಕೆಲವು ರಾಗಗಳನ್ನು ಹಾಡಿದರೆ ತಮಗೆ ತೊಂದರೆ ಉಂಟಾಗುತ್ತದೆ ಎಂಬ ಮೂಢನಂಬಿಕೆಯನ್ನಿರಿಕೊಳ್ಳುವಿದನ್ನು ಕಾಣುತ್ತೇವೆ.

ಸಂಗೀತ ಕ್ಷೇತ್ರದಲ್ಲಿ ದಿಗ್ಗಜರಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ತಮ್ಮ ಸಿದ್ಧಿಯಿಂದ ಅನೇಕ ಪವಾಡವನ್ನು ಮಾಡಿದ್ದಾರೆ.

ದೀಕ್ಷಿತರು ಅಮೃತವರ್ಷಿಣಿ ರಾಗ ಹಾಡಿ ಮಳೆ ಬರಿಸಿರುವುದು, ತ್ಯಾಗರಾಜರು ಸತ್ತಿದ್ದವರನ್ನು ಸಂಗೀತದಿಂದ ಬದುಕಿಸಿದ್ದು, ತಾನ್ ಸೇನರು ಅಕ್ಬರರ ಆಸ್ಥಾನದಲ್ಲಿ ದೀಪಕರಾಗ ಹಾಡಿ ದೀಪವನ್ನು ಉರಿಯುವಂತೆ ಮಾಡಿದ್ದರು. ಈ ರೀತಿಯ ವಿಷಯಗಳು ಕುತೂಹಲ ಹೆಚ್ಚಿಸುವಂತಹದು. ಅವರು ಸಿದ್ದಿ ಪುರಿಷರಾದ ಕಾರಣ ಅವರಿಂದ ಈ ರೀತಿಯ ಪವಾಡವು ಆಗಲು ಸಾಧ್ಯ.

ರಾಗಗಳಲ್ಲಿ ವರಾಳಿ, ಮುಖಾರಿ ರಾಗಗಳನ್ನು ಹಾಡಿದರೆ ಗುರು ಶಿಷ್ಯರ ಬಾಂಧವ್ಯ ಮುಕ್ತಾಯವಾಗುವುದೆಂದೂ, ಆಹಿರಿ ರಾಗ ಹಾಡಿದರೆ ಆದಿನ ಅವರಿಗೆ ಊಟ ದೊರೆಯುವುದಿಲ್ಲ ಎಂಬ ಮೂಢನಂಬಿಕೆಗಳು ಹಿಂದಿನಿಂದಲೂ ಇವೆ.

ಇತ್ತೀಚಿನ ದಿನಗಳಲ್ಲಿ ಈ ರೀತಿಯ ಮೂಢನಂಬಿಕೆಯು ಕಡಿಮೆಯಾಗುತ್ತಾ ಬಂದಿದೆ. ಹಿಸ ಆವಿಷ್ಕಾರಗಳನ್ನು ಮಾಡಿ ಸಂಗೀತ ಕ್ಷೇತ್ರದಲ್ಲಿ ಒಂದು ಹೊಸ ಅಲೆಯೇ ಏಳುವಂತೆ ಮಾಡುತ್ತಿದ್ದಾರೆ.

ಯುವ ಪೀಳಿಗೆಯವರು ಕರ್ನಾಟಕ ಸಂಗೀತ ಹಾಗೂ ಪಾಶ್ಚಾತ್ಯ ಸಂಗೀತ ಎಲ್ಲವನ್ನೂ ಆಸಕ್ತಿಯಿಂದ ಕಲಿತು ಯಾವುದೇ ಮೂಢನಂಬಿಕೆಯು ಇರದೆ ಸಂಗೀತ ಕ್ಷೇತ್ರದಲ್ಲಿ ಮುಂದುವರಿಯುತ್ತಿರುವುದು ಸಂತೀಷದ ವಿಷಯವೇ ಆಗಿದೆ.

ಎಲ್ಲಾ ವಿಷಯಗಳಲ್ಲಿಯೂ, ಕ್ಷೇತ್ರಗಳಲ್ಲಿಯೂ ನಂಬಿಕೆ ಇರಬೇಕು ಆದರೆ ಮೂಢನಂಬಿಕೆ ಇರಬಾರದರು.

**ಮೂಲಪದಗಳು-** ಪ್ರದರ್ಶನ ಕಲೆ, ಕರ್ನಾಟಕ ಸಂಗೀತ, ಮೂಢನಂಬಿಕೆ, ಪವಾಡ, ರಾಗಗಳಲ್ಲಿ ಮೂಢನಂಬಿಕೆ

## ಪೀಠಿಕೆ

ಕಲೆಯಲ್ಲಿ ಮೂಢನಂಬಿಕೆಯೆಂಬುದು ಆದಿ ಮಾನವನ ಕಾಲದಿಂದಲೂ ಪ್ರಯೋಗದಲ್ಲಿದೆ. ಆದಿ ಮಾನವನು ಪ್ರಕೃತಿಯ ಪ್ರಕೋಪದಿಂದ ಆಗಾಗ ಒದಗುವ ಪ್ರವಾಹಗಳು, ಮಳೆ, ಗಾಳಿ, ಮಿಂಚು, ಗುಡುಗು, ಅಗ್ನಿಪರ್ವತಗಳ ಸ್ಫೋಟ, ಭೋಕಂಪ ಇವುಗಳಿಂದ ಭೀತನಾಗಿ ನಿಸರ್ಗಕ್ಕೆ ಮೀರಿದಂತಹ ಯಾವುದೋ ಅಮಾನುಷ ಶಕ್ತಿಯೇ ಕಾರಣವೆಂದು ನಂಬಿ ಆ ಶಕ್ತಿಯ ಕೋಪವು ಶಾಂತವಾಗುವಂತೆ ಪೂಜೆ, ಪುನಸ್ಕಾರ ಮುಂತಾದವುಗಳನ್ನು ಆಚರಿಸತೊಡಗಿದನು.

ನದಿಗಳು, ಪಕ್ಷಿ, ಗೋವು ಮುಂತಾದವುಗಳನ್ನು ದೇವತಾ ಸ್ವರೂಪವೆಂದು ತಿಳಿದು ಪೂಜಿಸಲು ಪ್ರಾರಂಭಿಸಿದನು. ಅಲ್ಲಲ್ಲಿ ಗುಹೆಗಳನ್ನು ನಿರ್ಮಿಸಿ ಶಿಲೆಯನ್ನಿಟ್ಟು ಪೂಜಿಸಲು ಪ್ರಾರಂಭಿಸಿದನು.

ಇದು ದೈವನಂಬಿಕೆಯೋ ಅಥವಾ ಮೂಢನಂಬಿಕೆಯೋ ಅವನಿಗೆ ಮಾತ್ರ ತಿಳಿದಿತ್ತು. ಮನೋನೈರ್ಮಲ್ಯ, ಏಕಾಗ್ರತೆ ಮುಂತಾದವುಗಳನ್ನು ತಂದುಕೊಡುವ ಸಲುವಾಗಿ ಪ್ರಶಾಂತವಾದ ಮತ್ತು ನಿರ್ಮಲವಾದ ವಾತಾವರಣವನ್ನು ಕಲ್ಪಿಸಲು ಪ್ರಾರಂಭಿಸಿದನು.

ಹೀಗೆ ಆದಿ ಮಾನವನಲ್ಲಿ ಮೂಡಿದ ದೈವಭಕ್ತಿ ಕಾಲಕ್ರಮೇಣ ಪೂಜಾ ಗೃಹಗಳನ್ನು, ದೇವಸ್ಥಾನಗಳನ್ನು ವಿವಿಧ ರೂಪಗಳಲ್ಲಿ ಶಿಲ್ಪಗಳನ್ನು ಕಟ್ಟಿ ಪ್ರಾರ್ಥಿಸತೊಡಗುವಂತೆ ಮೂಡಿತು.

ನಾಸ್ತಿಕನಾದವನು ಇದನ್ನು ಮೂಢನಂಬಬಿಕೆ ಎಂದು ಹೇಳಿದರೂ ಕೆಲವರು ದೈವಸಂಕಲ್ಪವೆಂದು ನಂಬುತ್ತಾರೆ.

**ಸಾಹಿತ್ಯಾವಲೋಃಖನ**

**ಕರ್ನಾಟಕ ಸಂಗೀತ ವಾಹಿನಿ:** ಡಾ|| ರಾ. ಸತ್ಯನಾರಾಯಣರವರು ಪವಾಡ ಮತ್ತು ಮೂಢನಂಬಿಕೆ ಇವುಗಳ ವ್ಯತ್ಯಾಸ ಹಾಗೂ ಅನೇಕ ಉದಾಹರಣೆಗಳೊಂದಿಗೆ ಸವಿವರವಾಗಿ ವಿವರಿಸಿದ್ದಾರೆ. ಪ್ರಾಣಿ, ಪಕ್ಷಿ, ಗಿಡ, ಮರಗಳು ಸಹ ಸಂಗೀತವನ್ನು ಆಹ್ಲಾದಿಸುತ್ತವೆ ಎಂದು ಸುಂದರವಾಗಿ ಚಿತ್ರಿಸಿದ್ದಾರೆ.

**ಕರ್ನಾಟಕ ಸಂಗೀತ ದೀಪಿಕೆ:** ಡಾ|| ವಿ. ಎಸ್. ಸಂಪತ್ಕುಮಾರಾಚಾರ್ಯ ಹಾಗೂ ಪ್ರೊ. ವಿ ರಾಮರತ್ನಂ ಅವರು ಬರೆದಂತಹ ಪುಸ್ತಕದಲ್ಲಿ ಶ್ರೀ ತ್ಯಾಗರಾಜರು, ಶ್ರೀ ಮುತ್ತುಸ್ವಾಮಿ ದೀಕ್ಷಿತರು ಹಾಗೂ ಅನೇಕ ವಿದ್ವಾಂಸರುಗಳು ತಮ್ಮ ವಿದ್ವತ್ ಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿರುವುದರ ಬಗ್ಗೆ ವಿವರಿಸಿದ್ದಾರೆ. ಶ್ರೀಸಾಮಾನ್ಯ ಜನರಿಗೆ ಇವು ಮೂಢನಂಬಿಕೆ ಎಂದು ಅನಿಸಿದರೂ ಅವರ ದಿವ್ಯಶಕ್ತಿಯಿಂದ ಇದು ಸಾಧ್ಯವಾಗಿರುವಂತಹದು ಎಂದು ಅಧ್ಭುತವಾಗಿ ತಿಳಿಸಿದ್ದಾರೆ.

ಪ್ರೊ. ವಿ. ಸಾಂಬಮೂರ್ತಿಯವರು ತಮ್ಮ '**South Indian Music'** ಎಂಬ ಪುಸ್ತಕದಲ್ಲಿ ಸಂಗೀತದಿಂದ ಆರೋಗ್ಯ ವೃದ್ಧಿಯಾಗುವುದು, ಸಂಗೀತದಲ್ಲಿ ಅನೇಕ ಪವಾಡಗಳನ್ನು ಮಾಡಬಹುದು ಎಂದು ಸವಿವರವಾಗಿ ತಿಳಿಸಿದ್ದಾರೆ.

ಈ ಮೂರು ಪುಸ್ತಕಗಳಲ್ಲಿ "ಪ್ರದರ್ಶಕ ಕಲೆಗಳಲ್ಲಿ ಮೂಢನಂಬಿಕೆ" ಎಂಬ ಶೀರ್ಷಿಕೆಗೆ ಅನೇಕ ವಿಷಯಗಳು ಅಭ್ಯವಾದವು. ಸಂಗೀತ ವಾಹಿನಿ ಪುಸ್ತಕದಲ್ಲಿ ಮೂಢನಂಬಿಕೆ ಹಾಗೂ ಪವಾಡಗಳ ಬಗ್ಗೆ ಅನೇಕ ವಿಷಯಗಳ ಸಂಗ್ರವಿದ್ದು, ಅದರಲ್ಲಿ ಕೆವನ್ನು ಮಾತ್ರ ಈ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

**ಲೇಖನದ ಮೂಲ ವಿವರಣೆ**

ಕಲೆಯಲ್ಲಿ ಮೂಢನಂಬಿಕೆ ಎಂಬುದು ಪ್ರಾಚೀನಕಾಲದಿಂದಲೂ ಇದೆ ಎಂಬುದನ್ನು ನಾವು ಕೇಳಿದ್ದೇವೆ. ಕೆಲವು ವಿಷಯಗಳನ್ನು ನಂಬಲು ಸಾಧ್ಯವಿಲ್ಲ. ಈ ವಿಷಯಗಳನ್ನು ಪವಾಡ ಎನ್ನುವುದಕ್ಕಿಂತ ಮೂಢನಂಬಿಕೆ ಎಂದು ಹೇಳುವುದೇ ಸೂಕ್ತ. ಆದರೆ, ಕೃಷ್ಣನ ಕೊಳಲು

ನಾದದಿಂದ ಅಶುಗಳು ಮೇಯುವುದನ್ನು ಮರೆತುವು. ಗಿಡಮರಗಳು ಪುಲಕಗೊಂಡು ಚಿಗುರಿದವು. ಜಿಂಕೆಗಳು ಆಸಾವೇರಿ ರಾಗದಿಂದ, ಹಾವುಗಳು ಪುನ್ನಗವರಾಳಿ ರಾಗದಿಂದ, ಹಲ್ಲಿಗಳು ಗೌಳಿಪಂತು ರಾಗದಿಂದಲೂ ಆಕರ್ಷಿತವಾಗುತ್ತವೆ ಎಂಬುದು, ಹನುಮಂತನು ಗುಂಡಕ್ರಿಯೆ ರಾಗವನ್ನು ಹಾಡಿದಾಗ ಬಂಡೆಗಳು ಕರಗಿ ನೀರಾದವು ಎಂಬುದು ಸತ್ಯ. (ಸತ್ಯನಾರಾಯಣ ಆರ್.,2001).

ಹಾಗೆಯೇ ತ್ಯಾಗರಾಜರು ಬಾವಿಯಲ್ಲಿ ಮುಳುಗಿ ಸತ್ತಿದ್ದ ಶೇಷಸ್ಯನೆಂಬಾತನನ್ನು, ಬಿಲಹರಿರಾಗದ ಕೃತಿಯನ್ನು ರಚಿಸಿ ಹಾಡಲಾಗಿ ಅವನ್ನು ಬದುಕಿಸಿದರೆಂದೂ, ಮುತ್ತುಸ್ವಾಮಿ ದೀಕ್ಷಿತರು ಅಮೃತವರ್ಷಿಣಿ ರಾಗದಲ್ಲಿ ಕೃತಿಯನ್ನು ರಚಿಸಿ ಹಾಡಲು ಕುಂಭದ್ರೋಣದ ಮಳೆಯಾಯಿತು. ಅದರ ಅತಿವೃಷ್ಟಿಯನ್ನು ತಪ್ಪಿಸಲು ಇದೇ ಉಪಾಯವನ್ನು ಮಾಡಿದರು. ಈ ಮಳೆಯನ್ನು ಅಲ್ಲಿದ್ದವರೆಲ್ಲರೂ ಅನುಭವಿಸಿದರು. ಇದಕ್ಕೆ ಸಂಗೀತವೂ ಕಾರಣವಾದರೆ ಅದರಿಂದ ಹೇಗೆ ಮಳೆ ಬಂದಿತು? ಎಂಬ ಸಂಬಂಧವು ಗೋಚರವಲ್ಲ. ಅಷ್ಟೇ ಅಲ್ಲದೇ, ಅವರಲ್ಲದೇ ಬೇರೆ ಯಾರು ಹಾಡಿದರು ಮಳೆಯಾಗುತ್ತಿತ್ತೆಂಬುದನ್ನು ಹೇಳಲಾಗುವುದಿಲ್ಲ. ಅಲ್ಲದೆ ಅಮೃತವರ್ಷಿಣಿಯನ್ನು ಅವರಾಗಲೀ ಬೇರೆಯವರಾಗಲಿ ಹಾಡಿದಾಗಲೆಲ್ಲ ಮತ್ತೆ ಮಳೆ ಬರುತ್ತದೆಂಬುದೂ ಸಿದ್ಧವಿಲ್ಲ. (ಸಂಪತ್ ಕುಮಾರ್ ವಿ. ಎಸ್., ರಾಮರತ್ನಂ, ವಿ. 2015).

ಇತ್ತೀಚಿನ ವರ್ಷಗಳಲ್ಲಿ ಅನಾವೃಷ್ಟಿಯ ಸಂದರ್ಭದಲ್ಲಿ ಒಣಗಿಹೋಗಿದ್ದ ಒಂದು ಕೆರೆಯ ದಂಡೆಯಲ್ಲಿ ವಿದ್ವಾಂಸರೊಬ್ಬರು ಕುಳಿತು ಅಮೃತವರ್ಷಿಣಿ ಮತ್ತಿತ್ತರ ರಾಗಗಳನ್ನು ಗಂಟೆಗಟ್ಟಲೆ ಹಲವು ದಿನ ಪ್ರತಿನಿತ್ಯವೂ ಪ್ರಸ್ತುತ ಪಡಿಸಿದರೂ ಒಂದು ಹನಿಯೂ ಬೀಳಲಿಲ್ಲ.

ಅಕ್ಬರ್ ಚಕ್ರವರ್ತಿಯ ಆಸ್ಥಾನದಲ್ಲಿ ತಾನಸೇನರು ದೀಪಕತಾಗವನ್ನು ಹಾಡಿದ್ದರಿಂದ ದೀಪಗಳು ತಮಗಷ್ಟಕ್ಕೇ ತಾವೇ ಹೊತ್ತಿಕೊಂಡು ಉರಿದವು.

**ಮೂಢನಂಬಿಕೆಯೋ ಅಥವಾ ಪವಾಡವೋ?**

"ತ್ಯಾಗರಾಜರು ಸತ್ತದ್ದವರನ್ನು ಸಂಗೀತದಿಂದ ಬದುಕಿಸಿದರಂತೆ"

ತ್ಯಾಗರಾಜರ ಕೊನೆದಿನಗಳಲ್ಲಿ ಅವರು ಸಿದ್ಧಿ ಪಡೆದ ಹಿಂದಿನ ದಶಮಿಯ ರಾತ್ರಿ ಒಂದು ಸ್ವಪ್ನವಾಗಿ ಅದರಲ್ಲಿ ಶ್ರೀರಾಮನು ದರ್ಶನವಿತ್ತು ಅವರನ್ನು ತನ್ನ ಸಾನಿಧ್ಯಕ್ಕೆ ಕರೆದುಕೊಳ್ಳುವುದಾಗಿ ತಿಳಿಸಿದರು. ಈ ವಿಷಯವನ್ನು 'ಗಿರಿಪೈನೆಲ' ಎಂಬ ಶಹನರಾಗದ ಕೃತಿಯಲ್ಲಿ ಅಮರಗೊಳಿಸಿದ್ದಾರೆ. . (ಸಂಪತ್ ಕುಮಾರ್ ವಿ. ಎಸ್., ರಾಮರತ್ನಂ, ವಿ. 2015).

"ಮುತ್ತುಸ್ವಾಮಿ ದೀಕ್ಷಿತರು ಸಂಗೀತದಿಂದ ಮಳೆ ಬರಿಸಿದರಂತೆ"

"ಮುತ್ತುಸ್ವಾಮಿ ದೀಕ್ಷಿತರು ಸಂಗೀತದಿಂದ ಕಾಯಿಲೆಗಳನ್ನು ವಾಸಿಮಾಡುತ್ತಿದ್ದರಂತೆ"

ಈ ಮೇಲಿನ ಪ್ರಶ್ನೆಗಳು ಸಾಮಾನ್ಯ ಕುತೂಹಲದಿಂದ ಹುಟ್ಟುವಂತವು. ಸಿದ್ಧಾಂತ ಪೂರ್ತ್ವಕವಾದ ಅಥವಾ ರುಜುವಾತು ಮಾಡುವ ಉತ್ತರಗಳನ್ನು ಅವು ನಿರೀಕ್ಷಿಸುವುದಿಲ್ಲ. ಆದರೂ ಒಮ್ಮೊಮ್ಮೆ ಈ ಬಗೆಯ ವಿಚಾರಗಳು ಆಶ್ಚರ್ಯವನ್ನುಂಟು ಮಾಡುತ್ತವೆ.

ಈ ವಿಷಯಗಳೆಲ್ಲವೂ ನಂಬಿಕೆಯೋ ಅಥವಾ ಮೂಢನಂಬಿಕೆಯೋ ಎಂದು ತಿಳಿಯುವುದಿಲ್ಲ. ಆದರೂ ಈ ವಿದ್ವಾಂಸರುಗಳಲ್ಲಿರುವ ವಿದ್ವತ್ ಮಹಿಮೆಯಿಂದ ಈ ರೀತಿ ಪವಾಡವು ಆಗಿರಬಹುದು.

**ರಾಗಗಳಲ್ಲಿ ಮೂಢನಂಬಿಕೆ:**

ರಾಗಗಳನ್ನು ಹಾಡುವುದರಲ್ಲಿಯೂ ಸಹ ನಾವು ಮೂಢನಂಬಿಕೆಯನ್ನು ಕಾಣುತ್ತೇವೆ. ಹಿಂದೆ ಹಿಂದುಸ್ಥಾನಿ ಹಾಗು ಕರ್ನಾಟಕ ಸಂಗೀತ ಪದ್ಧತಿಯಲ್ಲಿ ರಾಗಗಳನ್ನು ಬೆಳಿಗ್ಗೆ, ಮಧ್ಯಹ್ನ, ಸಂಜೆ, ರಾತ್ರಿ ಹಾಡುವಂತಹವು ಎಂದು ವಿಭಜಿಸಲಾಗಿತ್ತು. ಹಿಂದುಸ್ಥಾನಿ ಪದ್ಧತಿಯಲ್ಲಿ ಬೆಳಗಿನ ದೇಶಾಕ್ಷಿ, ಭೂಪ್ ಮೊದಲಾದ ರಾಗಗಳಲ್ಲಿ ಬೇರೆ ಸಮಯದಲ್ಲಿ ದಾಡುತ್ತಿರಲಿಲ್ಲ. ಹಾಡಿದರೆ ಆ ರಾಗದ ಒಂದು ಪೂರ್ಣ ಸೌಂದರ್ಯ ಹೊರ ಬರುವುದಿಲ್ಲವೆಂದು ಅವರ ನಂಬಿಕೆ.

ಆದರೆ ಕರ್ನಾಟಕ ಸಂಗೀತದಲ್ಲಿ ಈ ರೀತಿ ಮಾಡಿದರೆ ಅನೇಕ ರಾಗಗಳು ಹಾಡಲು ಅವಕಾಶವಿಲ್ಲದೆ ನಶಿಸಿ ಹೋಗುತ್ತವೆ ಎಂದು ತಿಳಿದು ಅವರು ಈ ರಾಗವೇಳಾ ನಿಯಮವನ್ನು ಅನುಸರಿಸಲು ಮುಂದಾಗಲಿಲ್ಲ.

ಮಧ್ಯಾಮವತಿ ರಾಗವು ಮಧ್ಯಾಹ್ನದ ವೇಳೆ ಹಾಡಬಹುದಾದ ರಾಗ. ಆದರೆ ಈ ರಾಗವನ್ನು ಕಛೇರಿಯ ಕೊನೆಯಲ್ಲಿ ಹಾಡುವ ಸಂಪ್ರದಾಯವಿದೆ. ಕಾರಣ ರಾಗಕಾಲ ನಿಯಮವನ್ನು ಅನುಸರಿಸದೆ, ಹಾಡುವ ದೋಷನ್ನು ಹೊಗಲಾಡಿಸಿ ಶುಭಫಲವನ್ನು ಕೊಡುವ ರಾಗವೆಂದು ಭಾವಿಸಲಾಗಿದೆ.

ಇಂದಿಗೂ ಸಹ ಹಿಂದುಸ್ತಾನಿ ಪದ್ಧತಿಯವರು ಈ ರಾಗವೇಳಾ ನಿಯಮವನ್ನು ಅನುಸರಿಸಿಕೊಂಡು ಬಂದಿದ್ದಾರೆ.

ಹಾಗೆಯೇ ಕೆಲವು ರಾಗಗಳನ್ನು ಗುರುಮುಖೇನ ಕಲಿಯಬಾರದೆಂದೂ ಮೂಢನಂಬಿಕೆಯಿದೆ. ಉದಾ: ವರಾಳಿ ರಾಗ, ಈ ರಾಗವನ್ನು ಗುರುಮುಖೇನ ಕಲಿತರೆ ಗುರುಶಿಷ್ಯರ ಬಾಂಧವ್ಯವು ಮುಕ್ತಾಯವಾಗುತ್ತದೆ ಎಂಬ ಮೂಢನಂಬಿಕೆಯಿದೆ.

ಮತ್ತೆ ಕೆಲವರು ಮುಖಾರಿ ರಾಗವನ್ನು ಗುರುವಿನಿಂದ ಕಲಿತರೆ ಅವರ ಬಾಂಧವ್ಯವು ಮುಗಿಯುತ್ತದೆ ಎಂದು ನಂಬಿದ್ದಾರೆ.

ಸಂಗೀತ ಕಲಿಯುವ ವಿದ್ಯಾರ್ಥಿಗಳೂ ಸಹ ಈ ಕಾರಣದಿಂದ ಈಗಲೂ ಸಹ ಗುರುವಿನಿಂದ ಈ ರಾಗಗಳನ್ನು ಕಲಿಯಲು ಭಯ ಪಡುತ್ತಾರೆ. ಆದರೆ ಗುರುವಿನ ಮೂಲಕ ಈ ರಾಗಗಳನ್ನು ಕಲಿತಂತಹ ಅನೇಕರು ಅವರ ಗುರುವಿನೊಂದಿಗಿನ ಬಾಂಧವ್ಯವನ್ನು ಹಾಗೇ ಮುಂದುವರೆಸಿರುವ ಉದಾಹರಣೆಗಳೂ ಸಹ ಇವೆ.

ನನ್ನ ಸ್ನೇಹಿತೆಯೊಬ್ಬರು ಸಂಗೀತ ಪರೀಕ್ಷೆಯಲ್ಲಿ ವರಾಳಿರಾಹವನ್ನು ಕೇಳಿದಾಗ ಈ ರಾಗವನ್ನು ಹಾಡಲು ಸಾಧ್ಯವಿಲ್ಲ, ಹಾಡಿದರೆ ಗುರುವಿನ ಬಾಂದ್ಯವವು ಹೋಗುತ್ತದೆ ಎಂದು ಹೇಳಿ ಹಾಡಲಿಲ್ಲ. ಆದರೆ ಪರೀಕ್ಷೆಯಲ್ಲಿ ಈ ರಾಗವು ಹೆಚ್ಚು ಅಂಕಗಳಿಂದ ಕೂಡಿದ್ದು, ಹಾಡಲೇ ಬೇಕಿದ್ದರಿಂದ ಅವರು ಅಂಕಗಳನ್ನು ಕಳೆದುಕೊಳ್ಳಬೇಕಾಯಿತು. ಇದು ಮೂಢನಂಬಿಕೆಯೆಂದಲೇ ಆದಂತಹದು.

ಹಾಗೆಯೇ ಆಹಿರಿ ರಾಗವನ್ನು ಹಾಡಿದರೆ ಊಟ ಸಿಗುವುದಿಲ್ಲ ಎಂಬ ಮೂಢನಂಬಿಕೆಯಿದೆ. ಇದು ಕೆಲವರಿಗೆ ಅನುಭವವೂ ಆಗಿದೆ.

ನನ್ನ ಸಹೋದ್ಯೋಗಿಯವರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅವರಿಗೆ ಅವರ ಗುರುಗಳು ಆಹಿರಿ ರಾಗವನ್ನು ಬೆಳಿಗ್ಗೆಯ ಸಮಯದಲ್ಲಿ ಮಾಡುತ್ತಿರಲಿಲ್ಲ. ಅವರು ಈ ರಾಗವನ್ನು ಮಧ್ಯಾಹ್ನ ಮೂರು ಗಂಟೆಯ ನಂತರ ಮಾಡುತ್ತಿದ್ದರು. ಬೆಳಿಗ್ಗೆ ಈ ರಾಗವನ್ನು ಹಾಡಿದರೆ ಅವರಿಗೆ ಊಟ ದೊರೆತಿಲ್ಲದ ಅನುಭವವೂ ಆಗಿದೆ ಎಂದು ಹೇಳಿದರು.

ವಾದ್ಯಗಳನ್ನು ಎಡ ಕೈಯಿಂದ ನುಡಿಸುವುದು, ತಂಬೂರಿ ಶೃತಿ ಎಡ ಕೈಯಿಂದ ನುಡಿಸುವುದು ತಪ್ಪು. ಹಾಗೆಯೇ ತಾಳ ಹಾಕುವಾಗ ಎಡ ಕೈಯಿಂದ ಹಾಕುವುದು ತಪ್ಪು ಎಂದು ಹೇಳುತ್ತಾರೆ. ಬಲ ಎಡ ಎಂಬುದು ಎರಡೂ ಒಂದೆ ಆದರೆ ಬಲ ಕೈಯಿಂದ ದೇವತಾ ಪೂಜೆ, ಪುಣ್ಯ ಕಾರ್ಯಗಳು ನೆರವೇರುವುದರಿಂದ ಬಲಕ್ಕೆ ಶ್ರೇಷ್ಠ ಎಂದು ಹೇಳುತ್ತಾರೆ. ಇದು ಒಂದು ರೀತಿಯ ಮೂಢನಂಬಿಕೆಯೆ.

ಮೂಢನಂಬಿಕೆಯೆಂಬುದು ಕಲೆಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಬೇರೆ ಸಾಮಾಜಿಕ ವಿಷಯದಲ್ಲೂ ಹೆಚ್ಚಾಗಿ ಕಾಣಬಹುದು. ಒಂದು ಹೆಣ್ಣಿನ ಕಾಲುಗುಣದ ಬಗ್ಗೆ ಮಾತನಾಡಬಹುದು. ಹೆಣ್ಣು ಮಗುವಿನ ತಾತ್ಸಾರ, ಭವಿಷ್ಯದ ಬಗ್ಗೆ ತಿಳಿಯುವುದು ಹಾಗೂ ಒಳ್ಳೆಯದಾಗುವುದಕ್ಕೆ ಹೋಮ ಹವನಗಳನ್ನು ಮಾಡಿಸುವುದು ಮುಂತಾದ ಮೂಢನಂಬಿಕೆಗಳನ್ನು ನಾವು ಸಾಮಾನ್ಯವಾಗಿ ಕಾಣುತ್ತೇವೆ.

## ಸಮಾರೋಪ

ಕಲೆಯ ವಿಷಯದಲ್ಲಿ ಹೆಣ್ಣು ಗಂಡು ಇಬ್ಬರೂ ಸರಿ ಸಮಾನರು. ಇತ್ತೀಚಿನ ದಿನಗಳಲ್ಲಿ ಹೊಸ ಆವಿಷ್ಕಾರಗಳನ್ನು ಮಾಡಿ ಮೂಢನಂಬಿಕೆಗಳಿಂದ ಹೊರ ಬಂದು ಕಲೆಯನ್ನು ಪ್ರೋತ್ಸಾಹಿಸಿ ಮುಂದೆ ತರುತ್ತಿರುವುದು ಸಂತೋಷದ ಸಂಗತಿಯೇ ಸರಿ.

ಹಿಂದೆ ಇದ್ದಂತಹ ಮೂಢನಂಬಿಕೆಗಳನ್ನು ಇಂದಿನ ಯುವ ಪೀಳಿಗೆಯವರು ನಂಬದೆ, ಹೊಸ ರೀತಿಯ ಫ್ಯೂಜನ್ (Fusion) ಗಳು ರಾಗ ಸಂಯೋಜನೆಗಳನ್ನು ಮಾಡಿ, ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ ಆವಿಷ್ಕಾರದಿಂದ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ನಮ್ಮ ಸಂಗೀತ ವಾದ್ಯಗಳಾದ ವೀಣೆ, ಮೃದಂಗ, ಕೊಳಲು ಮುಂತಾದ ವಾದ್ಯಗಳ ಜೊತೆಗೆ ಯಾವುದೇ ಮೂಢನಂಬಿಕೆಗಳಿಲ್ಲದೆ ಪಾಶ್ಚಾತ್ಯಾ ವಾದ್ಯಗಳಾದ ಕೀ ಬೋರ್ಡ್, ಡ್ರಮ್ಸ್, ಪಿಟೀಲು ಮೊದಲಾದವುಗಳನ್ನು ಬಳಸಿ ಹೊಸ ಪ್ರಯೋಗಗಳನ್ನು ಮಾಡಿ, ಇತ್ತೀಚಿನ ಸಂಗೀತ ಪ್ರಪಂಚಕ್ಕೆ ಸರಿ ಹೊಂದುವಂತೆ ಸಂಗೀತ ಪ್ರಿಯರಿಗೂ ಇಷ್ಟವಾಗುವ ರೀತಿಯಲ್ಲಿ ಪ್ರಯೋಗಗಳನ್ನು ಮಾಡಿ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಸಂತೋಷದ ವಿಷಯ.

ಈ ಎಲ್ಲಾ ವಿಷಯಗಳು ನಂಬಿಕೆಯಾದರೆ ನಾಸ್ತಿಕರಿಗೆ ಮೂಢನಂಬಿಕೆ.

## ಉಲ್ಲೇಖಗಳು


1. ಸತ್ಯನಾರಾಯಣ ಆರ್. (2001). ಕರ್ನಾಟಕ ಸಂಗೀತ ವಾಹಿನಿ (ದ್ವಿತೀಯ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ.
2. ಸಂಪತ್ ಕುಮಾರ್ ವಿ.ಎಸ್., ರಾಮರತ್ನಂ, ವಿ. (2015). ಕರ್ನಾಟಕ ಸಂಗೀತ ದೀಪಿಕೆ. ಡಿ.ವಿ.ಕೆ. ಮೂರ್ತಿ ಪ್ರಕಾಶನ.
3. . Sambamoorthy, P. (1951). *South Indian music: Book V.* Indian Music Publishing House.